


## 2010ರ ಹೆಗ್ಗಳಿಕೆ

ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಆಯ್ದ ಪ್ರಮುಖರೊಡನೆ 2010 ಏನು ಹೇಗೆ ಎತ್ತ? ಬಿ.ಎಂ.ಹನೀಫ್ ನಡೆಸಿದ ಪ್ರಶ್ನೋತ್ತರ ಚೆನ್ನಾಗಿತ್ತು. ಕುತೂಹಲಭರಿತ ಪ್ರಶ್ನೆ ಕೇಳಿ ಅವರಿಂದ ದೊರೆತ ಉತ್ತರ, ಪ್ರತಿಕ್ರಿಯೆಗಳನ್ನು ಯಥಾವತ್ತಾಗಿ ಪ್ರಕಟಿಸಿರುವುದು ಪತ್ರಿಕೆಯ ಹೆಗ್ಗಳಿಕೆಯಾಗಿದೆ.

-ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ/ಅರ್ಜುನ್ ವಿ.ಮಂಡ್ಯ/ ಪಿ.ಗೋವಿಂದರಾಜ್, ಶಿವಮೊಗ್ಗ/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ

## ಸಂಕಲ್ಪ ಸಮಯೋಚಿತ

ಬೇದ್ರೆ ಎನ್. ಮಂಜುನಾಥರ 'ಹೊಸ ವರ್ಷದ ಸಂಕಲ್ಪ' ಲೇಖನ ಮೆಚ್ಚುಗೆಯಾಯಿತು.

-ರಾಜಶೇಖರ ಗೌಡ, ಕೊಟ್ಟೂರು/ ಎಚ್.ಆನಂದಕುಮಾರ್, ಚಿತ್ರದುರ್ಗ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

## ಅ(ರ್ಥ)ಪೂರ್ಣ!

ಹೊಸ ವರ್ಷದ ಮೊದಲ ಸಂಚಿಕೆ ವೈವಿಧ್ಯಮಯವಾಗಿದ್ದು ಹರುಷ ನೀಡಿತು. ಮುಖಪುಟದ ಏನು ಹೇಗೆ.. ಲೇಖನದಲ್ಲಿ ಬೆಲೆ ಏರಿಕೆ, ನಿರುದ್ಯೋಗೀಕರಣ ಹಾಗೂ ಆಡಳಿತದ ನಿಷ್ಕ್ರಿಯತೆಯಿಂದ ಬೇಸತ್ತ ಜನಸಾಮಾನ್ಯರ ಹಾಗೂ ನೆರೆಹಾವಳಿ ಮತ್ತು ಬೆಳೆನಾಶದಿಂದ ಕಂಗೆಟ್ಟಿರುವ ರೈತರ ಅನಿಸಿಕೆಗಳನ್ನೂ ಸೇರಿಸಿದ್ದರೆ ಇನ್ನಷ್ಟು ಅರ್ಥಪೂರ್ಣವಾಗುತ್ತಿತ್ತು!

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ/ ಕೆ.ಎಸ್. ರಘುನಾಥರಾವ್, ಫಲ್ಗುಣಿ




## ಸುಧಾ ಲೇಖನಕ್ಕೆ ಪ್ರಶಸ್ತಿ

'ಸುಧಾ ವಾರಪತ್ರಿಕೆ'ಯಲ್ಲಿ ಪ್ರಕಟವಾದ 'ಸಲಿಂಗ ಕಾಮ ಸರಿಯೇ' ಎಂಬ ಲೇಖನ (ಜುಲೈ 23, 2009)ಕ್ಕೆ ಯುನಿಸೆಫ್, ಎಚ್ಐವಿ/ಏಡ್ಸ್ ಪತ್ರಿಕೋದ್ಯಮ ಪ್ರಶಸ್ತಿ ಲಭಿಸಿದೆ.

ರಾಜಭವನದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಲೇಖಕ ಡಾ. ಡಿ.ಕೆ. ಮಹಾಬಲರಾಜು ಅವರು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು. ಶ್ರೀಮತಿ ಪ್ರಫುಲ್ಲ ಭಾರದ್ವಾಜ್ ಅವರೂ ಇದ್ದಾರೆ.

## ಸಿನಿಮೀಯ ಧಾರಾವಾಹಿ

ಸಖೀ ಯಾರೇ ನಿನ್ನವನು! ಸಿನಿಮಾ ತಯಾರಿಸುವುದಕ್ಕೇ ಹೆಣೆದ ಕಥೆಯಂತಿದೆ! ನಾಯಕಿ ಸಂಸ್ಕೃತ ಉಪನ್ಯಾಸಕಿಯಾಗೋದಕ್ಕಿಂತ ಕನ್ನಡವಾಗಿದ್ದರೆ ಚೆನ್ನಾಗಿತ್ತು. ಪರವಾಗಿಲ್ಲ ಬಿಡಿ, ಸಿನಿಮಾ ನಿರ್ದೇಶಕರು ಬದಲಾಯಿಸಿಕೊಳ್ಳುತ್ತಾರೆ!

-ರೇಷ್ಮಾ ಎ.ಎಸ್. ಬಾಳೇಹೊನ್ನೂರು

## ಕುತೂಹಲ ಹುಟ್ಟಿಸಿದಾಕೆ!



ಸಖೀ... ಕುತೂಹಲ ಹುಟ್ಟಿಸಿದ್ದಾಳೆ.

- ಚೇತನ ಭೀಮನಗೌಡರ, ಹೊಳೆಆಲೂರು

## ಪರೀಕ್ಷೆ ಇದೆ, ಬೇಗ ಮುಗಿಸಿ

ಗುರುವಾರ ಬಂದರೆ ಸಾಕು, ಸಖೀ... ಧಾರಾವಾಹಿಗೆ ಕಾಯುವಂತಾಗಿದೆ. ತುಂಬಾ ಚೆನ್ನಾಗಿದೆ. ನನ್ನ ಗೆಳತಿ ಗೀತಾ ಸೇರಿದಂತೆ ನನ್ನ ಜತೆಗೆ ಓದುತ್ತಿರುವ ಹಲವರು ಈ ಧಾರಾವಾಹಿ ತಪ್ಪದೇ ಓದುತ್ತೇವೆ. ಆದರೆ ನವೋದಯ ಶಾಲೆಯಲ್ಲಿ ಓದುತ್ತಿರುವ ನಮಗೆ ಇದೀಗ ಪರೀಕ್ಷೆ ಸಮೀಪಿಸುತ್ತಿದೆ. ಹಾಗಾಗಿ ಹೆಚ್ಚಾಗಿ ಪ್ರಕಟಿಸಿ ಬೇಗ ಮುಕ್ತಾಯಗೊಳಿಸಿ.

- ಚಂದ್ರಕಲಾ, ದಾವಣಗೆರೆ

## ಸೆಲಿಬ್ರಿಟೀಸ್ ಸಾಕೆ?

2010 ಏನು ಎತ್ತ? –ಬರೀ ಸೆಲಿಬ್ರಿಟೀಸ್ ಮಾತ್ರ ಏಕೆ? ಜನಸಾಮಾನ್ಯರನ್ನೂ, ಕಡುಬಡವರನ್ನೂ ಆಯ್ಕೆ ಮಾಡಿ ಸಂದರ್ಶಿಸಬೇಕಿತ್ತು.

- ರೇಷಮ್ಮ, ಹೊನ್ನೂರು

## ಸುಂದರ ದಿನದರ್ಶಿಕೆ

2010ರ ಸುಂದರವಾದ ದಿನದರ್ಶಿಕೆ ನೀಡಿದ್ದೀರಿ. ಧನ್ಯವಾದಗಳು.

-ಮೇಗೋ. ಸುಬ್ಬಣ್ಣ, ಮೇಗರವಳ್ಳಿ

## ಚದುರಂಗರೇ ಸಾಟಿ

ಚದುರಂಗ ಅವರಿಗೆ ಅವರೇ ಸಾಟಿ. ಅವರದ್ದು ನಿಜಕ್ಕೂ ಅದ್ಭುತ ಸಾಹಿತ್ಯ ಸೇವೆ.

-ಎ.ಕೆ. ಪಟ್ಟಾಭಿ, ಬೆಂಗಳೂರು

## ಬಿದ್ದು ಬಿದ್ದು ನಗಬೇಕು!

'ನೀವು ಕೇಳಿದಿರಿ' ವಿಭಾಗದಲ್ಲಿ ಸ್ವಾರಸ್ಯವಾದ ಪ್ರಶ್ನೆಗಳಿಗೆ, ಉತ್ತರಗಳು ಬಿದ್ದು ಬಿದ್ದು ನಗುವಂತಾಗಿವೆ.

-ಮ. ಪ್ರಿಯ, ಮೈಸೂರು

## ಪಶ್ಚಿಮದಿಂದ ಪೂರ್ವಕ್ಕೆ

ಎನ್. ವಾಸುದೇವರವರು (ವಿದ್ಯಮಾನ ವಿಸ್ಮಯ) ತಮ್ಮ ಲೇಖನದಲ್ಲಿ ಭೂಮಿ ಪೂರ್ವದಿಂದ ಪಶ್ಚಿಮಕ್ಕೆ ನಿರಂತರ ಸುತ್ತುತ್ತದೆ ಎಂದಿದ್ದಾರೆ. ಇದು ತಪ್ಪು, ಭೂಮಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ನಿರಂತರ ಸುತ್ತುತ್ತದೆ.

-ಮುಗುಳುವಳ್ಳಿ ಸದಾಶಿವ, ಬಾಳೇಹೊನ್ನೂರು




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು



ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ, ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-560 018.

9880444450

ಮೈಸೂರು ಖಾಯಂ ಮನೆ ವಿಳಾಸ ಶ್ರೀ ಚಕ್ರ ಜ್ಯೋತಿಷ್ಯಾಲಯ ಪಂಡಿತ್ ಶ್ರೀ ಸಂತೋಷ್‌ಕುಮಾರ್ ನಂ.89/49, ವಿಜಯನಗರ 2ನೇ ಫೇಸ್, 4ನೇ ಸ್ಟೇಜ್, ಹುಣಸೂರು ರಸ್ತೆ, ಯಶಸ್ವಿನಿ ಕಲ್ಯಾಣ ಮಂಟಪ ಮತ್ತು ಎಸ್.ಆರ್.ಎಸ್. ಗೇಟ್ ಹತ್ತಿರ, ಹೂಟಗಳ್ಳಿ, ಮೈಸೂರು-18.

9845899127